ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**
**GSTIN : 29AAALB0060D1ZS**

ಸಂಖ್ಯೆ :
**No.** ಬೆಂಅಪ್ರಾ/ನಯೋಸ/PRL-19/2019-20/ 172 /2023-24. ದಿನಾಂಕ : **Date :** 19/4/2023
C.No. 142689

# ಕಾರ್ಯಾದೇಶ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2-A) ರಡಿಯಲ್ಲಿ]

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಹೆಸರುಘಟ್ಟ ಹೋಬಳಿ, ಸೋಲದೇವನಹಳ್ಳಿ ಗ್ರಾಮದ ಸರ್ವೆ ನಂ.76(ಪಿ) ರಲ್ಲಿ 06ಗುಂಟೆ, 79(ಪಿ) ರಲ್ಲಿ 32ಗುಂಟೆ ಮತ್ತು 80(ಪಿ) ರಲ್ಲಿ 01ಎಕರೆ-3.50ಗುಂಟೆ, ಒಟ್ಟು 02ಎಕರೆ-01.50ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಮೆ|| ಮೈಸೂರು ಸ್ಟೋನ್ ವೇರ್ ಪೈಪ್ಸ್ ಮತ್ತು ಪಾಟರೀಸ್ ಲಿ., ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ 14.10.2019 ಮತ್ತು 10.10.2022.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 4.3.5 /2022, ದಿನಾಂಕ 19.11.2022.
5. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-19/20-21/2153/2022-23, ದಿನಾಂಕ 07.12.2022.
6. ಕೆನರಾ ಬ್ಯಾಂಕ್ ಚಲನ್ ನಂ. GN22124834, ದಿನಾಂಕ 12.12.2022.
7. ಈ ಕಛೇರಿಯ ಅ.ಟಿ. ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-19/20-21/2654/2022-23, ದಿನಾಂಕ 05.01.2023.
8. ಅಧಿಕ ಜಿಲ್ಲಾ ನೊಂದಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪರಿತ್ಯಾಜನಾ ಪತ್ರ BDA-1-04123-2022-23, ಸಿ.ಡಿ. ನಂ. BDAD1295, ದಿನಾಂಕ 18.03.2023.

ಬೆಂಗಳೂರು ಉತ್ತರ ತಾಲ್ಲೂಕು, ಹೆಸರುಘಟ್ಟ ಹೋಬಳಿ, ಸೋಲದೇವನಹಳ್ಳಿ ಗ್ರಾಮದ ಸರ್ವೆ ನಂ.76(ಪಿ) ರಲ್ಲಿ 06ಗುಂಟೆ, 79(ಪಿ) ರಲ್ಲಿ 32ಗುಂಟೆ ಮತ್ತು 80(ಪಿ) ರಲ್ಲಿ 01ಎಕರೆ-3.50ಗುಂಟೆ, ಒಟ್ಟು 02ಎಕರೆ-01.50ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ಅರ್ಜಿದಾರರಾದ ಮೆ|| ಮೈಸೂರು ಸ್ಟೋನ್ ವೇರ್ ಪೈಪ್ಸ್ ಮತ್ತು ಪಾಟರೀಸ್ ಲಿ., ರವರು ಉಲ್ಲೇಖ [1] ರಲ್ಲಿನ ಅರ್ಜಿಯಲ್ಲಿ ಕೋರಿರುತ್ತಾರೆ.

ಉಲ್ಲೇಖ [2] ರಲ್ಲಿ ನಮೂದಿಸಿರುವ ದಿನಾಂಕ 19.11.2022 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 4.3.5/2022 ರ ನಡವಳಿಯಲ್ಲಿ, "ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ಅನುಮೋಧಿತ

---

ಮಹಾಯೋಜನೆ RMP-2015 ರ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದರಿಂದ, ಅರ್ಜಿದಾರರು ತಿಳಿಸಿರುವಂತೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ದಾಖಲಿಸಿರುವ ಅಪೀಲ್ ಸಂಖ್ಯೆ 393/2020-21 ರ ದಾವೆಯನ್ನು ಹಿಂಪಡೆದಿರುವ ಬಗ್ಗೆ ದಾಖಲೆ ಸಲ್ಲಿಸಿದ ನಂತರ ಕಾರ್ಯಾದೇಶ ನೀಡುವ ಷರತ್ತಿಗೊಳಪಡಿಸಿ, ಬೆಂಗಳೂರು ಉತ್ತರ ತಾಲ್ಲೂಕು, ಹೆಸರುಘಟ್ಟ ಹೋಬಳಿ, ಸೋಲದೇವನಹಳ್ಳಿ ಗ್ರಾಮದ ಸರ್ವೆ ನಂ.76(ಪಿ) ರ ಪೈಕಿ 06ಗುಂಟೆ, 79(ಪಿ) ರಲ್ಲಿ 32ಗುಂಟೆ ಮತ್ತು 80(ಪಿ) ರಲ್ಲಿ 01ಎಕರೆ-3.50ಗುಂಟೆ, ಒಟ್ಟು 02ಎಕರೆ-01.50ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು 'Demarcation and Development' ಉದ್ದೇಶಕ್ಕೆ ಸಾಮಾನ್ಯ ಷರತ್ತುಗಳಿಗೊಳಪಟ್ಟು, ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು".

ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ [3] ರ ಈ ಕಛೇರಿ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ಒಟ್ಟು ₹.14,08,360/- [₹. ಹದಿನಾಲ್ಕು ಲಕ್ಷದ ಎಂಟು ಸಾವಿರದ ಮೂನ್ನೂರ ಅರವತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ತಿಳಿಸಲಾಗಿತ್ತು. ಉಲ್ಲೇಖ [4] ರಲ್ಲಿನ ಪ್ರಾಧಿಕಾರದ ಕೆನರಾ ಬ್ಯಾಂಕ್ ಚಲನ್ ನಂ. GN22124834, ಮೂಲಕ ದಿನಾಂಕ 12.12.2022 ಗಳಂದು ಪಾವತಿಸಿರುತ್ತಾರೆ. ಸದರಿ ಮೊತ್ತವು ಪ್ರಾಧಿಕಾರದ ಖಾತೆಗೆ ಸಂದಾಯವಾಗಿರುವ ಬಗ್ಗೆ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 21.12.2022 ರಂದು ದೃಢೀಕರಿಸಿರುತ್ತಾರೆ. ಅರ್ಜಿದಾರರು ದಿನಾಂಕ 03.01.2023 ರ ಪತ್ರದೊಂದಿಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ದಾಖಲಿಸಿರುವ ಅಪೀಲ್ ಸಂಖ್ಯೆ 393/2020-21 ರ ದಾವೆ ಮುಕ್ತಾಯವಾಗಿರುವ ಬಗ್ಗೆ ದಾಖಲೆ ಸಲ್ಲಿಸಿರುತ್ತಾರೆ.

ತಾತ್ಕಾಲಿಕ ಕರಡು ವಸತಿ ವಿನ್ಯಾಸ ನಕ್ಷೆಯಲ್ಲಿ ಅಳವಡಿಸಿರುವಂತೆ ಉದ್ಯಾನವನ / ಬಯಲು ಜಾಗ, ಪಬ್ಲಿಕ್ ಯುಟಿಲಿಟಿ ಮತ್ತು ರಸ್ತೆಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸುವಂತೆ ಅರ್ಜಿದಾರರಿಗೆ ಮತ್ತು ಸದರಿ ಪ್ರದೇಶಗಳನ್ನು ಹಸ್ತಾಂತರಿಸಿಕೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು [ಡಾ: ಶಿವರಾಮಕಾರಂತ ಬಡಾವಣೆ ವಿಭಾಗ], ಇವರಿಗೆ ಉಲ್ಲೇಖ [5] ರ ಈ ಕಛೇರಿಯ ಪತ್ರದಲ್ಲಿ ತಿಳಿಸಲಾಗಿತ್ತು. ತಾತ್ಕಾಲಿಕ ಕರಡು ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ, ಪಬ್ಲಿಕ್ ಯುಟಿಲಿಟಿ ಮತ್ತು ರಸ್ತೆಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ದಿನಾಂಕ 18.03.2023 ರಂದು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಉಲ್ಲೇಖ [6] ರಂತೆ ಹಸ್ತಾಂತರಿಸಿ ಕೊಂಡಿರುವುದಾಗಿ ಕಾರ್ಯಪಾಲಕ ಅಭಿಯಂತರರು, ಡಿ.ಎಸ್.ಕೆ.ಎಲ್. ವಿಭಾಗ-2 ಇವರು ವರದಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಉತ್ತರ ತಾಲ್ಲೂಕು, ಹೆಸರುಘಟ್ಟ ಹೋಬಳಿ, ಸೋಲದೇವನಹಳ್ಳಿ ಗ್ರಾಮದ ಸರ್ವೆ ನಂ.76(ಪಿ) ರ ಪೈಕಿ 06ಗುಂಟೆ, 79(ಪಿ) ರಲ್ಲಿ 32ಗುಂಟೆ ಮತ್ತು 80(ಪಿ) ರಲ್ಲಿ 01ಎಕರೆ-3.50ಗುಂಟೆ,

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಹೆಸರುಘಟ್ಟ ಹೋಬಳಿ, ಸೋಲದೇವನಹಳ್ಳಿ ಗ್ರಾಮದ ಸರ್ವೆ ನಂ.78(ಪಿ) ರ ಪೈಕಿ 06ಗುಂಟೆ, 79(ಪಿ) ರಲ್ಲಿ 32ಗುಂಟೆ ಮತ್ತು 80(ಪಿ) ರಲ್ಲಿ 01ಎಕರೆ-3.50ಗುಂಟೆ, ಒಟ್ಟು 02ಎಕರೆ-01.50ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17(2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಮೆ|| ಮೈಸೂರು ಸ್ಟೋನ್ ವೇರ್ ಪೈಪ್ಸ್ ಮತ್ತು ಪಾಟರೀಸ್ ಲಿ., ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ

---

ಒಟ್ಟು 02ಎಕರೆ-01.50ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2-A) ರ ಅಡಿಯಲ್ಲಿ demarcation and development' ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

| | |
|---|---|
| 1 | ತಾತ್ಕಾಲಿಕ ಅನುಮೋದಿತ ಬಡಾವಣೆ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ. |
| 2 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು, ವಿಲೇವಾರಿ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 3 | ವಸತಿ ವಿನ್ಯಾಸ ನಕ್ಷೆಯಲ್ಲಿ ತೋರಿಸಿರುವ ರಸ್ತೆ ಅಗಲವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. |
| 4 | ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು. |
| 5 | ಅರ್ಜಿದಾರರು ಉದ್ದೇಶಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ, ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂದೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 6 | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ತಪ್ಪು ದಾಖಲೆ ಅಥವಾ ಇನ್ನಿತರೆ ಫೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಬಡಾವಣೆ ನಕ್ಷೆ ಅನುಮೋದನೆಯು ತನ್ನಿಂದತಾನೆ ರದ್ದಾಗುವುದೆಂದು ಭಾವಿಸತಕ್ಕದ್ದು ಹಾಗೂ ಸಿವಿಲ್ ವ್ಯಾಜ್ಯಗಳೇನಾದರೂ ಇದ್ದಲ್ಲಿ ಪ್ರಾಧಿಕಾರವು ಜವಾಬ್ದಾರವಲ್ಲ. |
| 7 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು. |
| 8 | ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 9 | ವಸತಿ ವಿನ್ಯಾಸದಲ್ಲಿ ಎಲ್ಲಾ ರಸ್ತೆಗಳನ್ನು IRC Specification ಪ್ರಕಾರ ಅಭಿವೃದ್ಧಿಪಡಿಸತಕ್ಕದ್ದು. ಅದಕ್ಕೂ ಮುಂಚೆ ಅಂದಾಜುಪಟ್ಟಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದಿಂದ ಅನುಮೋದಿಸಿಕೊಳ್ಳತಕ್ಕದ್ದು. ರಸ್ತೆ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಅಭಿಯಂತರ ವಿಭಾಗದಿಂದ ಸ್ಥಳ ಪರಿಶೀಲನೆಗಾಗಿ ಮತ್ತು ಕಾಮಗಾರಿ ಪರಿಶೀಲನೆಗೆ ಅನುವು ಮಾಡಿಕೊಡತಕ್ಕದ್ದು. |

| | |
|---|---|
| 10 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸಕ್ಕದ್ದು. |
| 11 | ನಿವೇಶನಗಳನ್ನು ಯಾವ ಉದ್ದೇಶಕ್ಕಾಗಿ ಕಾಯ್ದಿರಿಸಿದೆಯೋ ಆ ಉದ್ದೇಶದಿಂದ ಬೇರೆ ಉದ್ದೇಶಕ್ಕೆ ಯಾವುದೇ ಕಾರಣದಿಂದಲೂ ಬದಲಾಯಿಸಬಾರದು. |
| 12 | ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯತಕ್ಕದ್ದು. |
| 13 | ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಅರ್ಜಿದಾರರೇ ಕಾರ್ಯಗತ ಮಾಡತಕ್ಕದ್ದು. ಸಿವಿಲ್ ಕಾಮಗಾರಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಉಪಯೋಗಿಸತಕ್ಕದ್ದು. |
| 14 | ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದು. |
| 15 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೆ ಗೃಹ ಬಳಕೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಗಳನ್ನು ಒದಗಿಸತಕ್ಕದ್ದು. (Dual Piping System) |
| 16 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 17 | BESCOM ನಿರ್ದೇಶನದಂತೆ ಬಡಾವಣೆಯಲ್ಲಿ ವಿದ್ಯುಚ್ಛಕ್ತಿ ಅಳವಡಿಸಲು ಕ್ರಮ ಕೈಗೊಳ್ಳತಕ್ಕದ್ದು. |
| 18 | ಸದರಿ ವಸತಿ ವಿನ್ಯಾಸದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ (EWS) ಮತ್ತು ಕಡಿಮೆ ಆದಾಯ ವರ್ಗದವರಿಗಾಗಿ (LIG) ವಸತಿ ಬಡಾವಣೆ ನಕ್ಷೆಯಲ್ಲಿ ಪ್ರಾಧಿಕಾರದ ದಿನಾಂಕ.08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ಘಟಕಗಳ ಶೇ.10 ರಷ್ಟು ವಸತಿ ಘಟಕಗಳನ್ನು (EWS) ಆರ್ಥಿಕ ದುರ್ಬಲ ವರ್ಗದವರಿಗಾಗಿ ಮತ್ತು (LIG) ಕಡಿಮೆ ಆದಾಯ ವರ್ಗದವರಿಗಾಗಿ ಕಾಯ್ದಿರಿಸತಕ್ಕದ್ದು. ಆರ್ಥಿಕವಾಗಿ ಹಿಂದುಳಿದವರಿಗಾಗಿ (EWS) ಕಾಯ್ದಿರಿಸಿದ ನಿವೇಶನಗಳನ್ನು ಸಮಾಮೇಲನಗೊಳಿಸಿದಲ್ಲಿ ಸದರಿ ಉದ್ದೇಶವೇ ವಿಫಲವಾಗುವುದರಿಂದ EWS ಗಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಸಮಾಮೇಲನಗೊಳಿಸಬಾರದು. |
| 19 | ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಇಲಾಖೆ, BESCOM ಇಲಾಖೆಗಳಿಂದ ಪಡೆದ NOC ಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು. |
| 20 | ವಸತಿ ವಿನ್ಯಾಸ ನಕ್ಷೆಯಲ್ಲಿ Transformer Yard, RWH, OHT, SWM, STP ಗಳಿಗಾಗಿ ಸೂಕ್ತಜಾಗಗಳನ್ನು ಕಾಯ್ದಿರಿಸಿದ್ದು ಇವುಗಳನ್ನು ಬದಲಾಯಿಸುವಂತಿಲ್ಲ ಹಾಗೂ ಸಂಬಂಧಪಟ್ಟ ಸಂಸ್ಥೆಯ ಅಭಿಪ್ರಾಯದಂತೆ ಅಭಿವೃದ್ಧಿಪಡಿಸುವುದು ಹಾಗೂ Transformer ಗಳನ್ನು ರಸ್ತೆಯಲ್ಲಿ ಅಳವಡಿಸದೇ, ಇದಕ್ಕಾಗಿಯೇ ಕಾಯ್ದಿರಿಸಲಾಗಿರುವ yard ಪ್ರದೇಶದಲ್ಲಿಯೇ ನಿರ್ಮಿಸುವುದು. |

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಹೆಸರುಘಟ್ಟ ಹೋಬಳಿ, ಸೋಲದೇವನಹಳ್ಳಿ ಗ್ರಾಮದ ಸರ್ವೆ ನಂ.76(ಪಿ) ರ ಪೈಕಿ 06ಗುಂಟೆ, 79(ಪಿ) ರಲ್ಲಿ 32ಗುಂಟೆ ಮತ್ತು 80(ಪಿ) ರಲ್ಲಿ 01ಎಕರೆ-3.50ಗುಂಟೆ, ಒಟ್ಟು 02ಎಕರೆ-01.50ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಮೆ|| ಮೈಸೂರು ಸ್ಟೋನ್ ವೇರ್ ಪೈಪ್ಸ್ ಮತ್ತು ಪಾಟರೀಸ್ ಲಿ., ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 21 | ಪ್ರಶ್ನಿತ ಪ್ರದೇಶದಲ್ಲಿ ನೈಸರ್ಗಿಕವಾಗಿ ಅಥವಾ RS ನಕ್ಷೆ ಅಥವಾ RMP ರಂತೆ ಹಾದು ಹೋಗುವ ಹಳ್ಳ ಮತ್ತು ಕೊಳ್ಳಗಳನ್ನು ಹಾಗೂ ಬಂಡಿದಾರಿ, ಕಾಲುದಾರಿಗಳನ್ನು ಒತ್ತುವರಿ ಮಾಡಬಾರದು. ನೀರಿನ ಹರಿವಿಕೆಗೆ ಅಡಚಣೆ ಉಂಟು ಮಾಡದೇ ಸರಾಗವಾಗಿ ನೀರು ಹರಿದು ಹೋಗುವಂತೆ ಅಭಿವೃದ್ಧಿಪಡಿಸತಕ್ಕದ್ದು. |
| 22 | ಅನುಮೋದಿತ ವಿನ್ಯಾಸ ನಕ್ಷೆಯನ್ನು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ(ರೇರಾ)ದಲ್ಲಿ ನೊಂದಣಿ ಮಾಡಿಸುವುದು. |
| 23 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶವು ಸೇರಿದಂತೆ ಬಡಾವಣೆಯಲ್ಲಿನ ಒಂದು ಹೆಕ್ಟೇರ್ ಪ್ರದೇಶದಲ್ಲಿ 241 ಮರಗಳಂತೆ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು. |
| 24 | ಪ್ರಶ್ನಿತ ಜಮೀನಿಗೆ ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು. |
| 25 | ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ಮೇಲ್ಕಂಡ ಷರತ್ತುಗಳಿಗೊಳಪಟ್ಟು ಬೆಂಗಳೂರು ಉತ್ತರ ತಾಲ್ಲೂಕು, ಹೆಸರುಘಟ್ಟ ಹೋಬಳಿ, ಸೋಲದೇವನಹಳ್ಳಿ ಗ್ರಾಮದ ಸರ್ವೆ ನಂ.76(ಪಿ) ರ ಪೈಕಿ 06ಗುಂಟೆ, 79(ಪಿ) ರಲ್ಲಿ 32ಗುಂಟೆ ಮತ್ತು 80(ಪಿ) ರಲ್ಲಿ 01ಎಕರೆ-3.50ಗುಂಟೆ, ಒಟ್ಟು 02ಎಕರೆ-01.50ಗುಂಟೆ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2-A) ರ ಅಡಿಯಲ್ಲಿ demarcation and development' ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಆಯುಕ್ತರು,
ಬೆಂಅಪ್ರಾ, ಬೆಂಗಳೂರು

ಇವರಿಗೆ,

ಕಾರ್ಯ ನಿರ್ವಾಹಕ ನಿರ್ದೇಶಕರು,
ಮೆ: ಮೈಸೂರು ಸ್ಟೋನ್ ವೇರ್ ಪೈಪ್ಸ್ ಅಂಡ್ ಪ್ರಾಟರೀಸ್ ಲಿ.,
# 30, ಸಪ್ತಗಿರಿ, ಜಿ.ಎಫ್-2, ಆರ್.ಎಂ.ವಿ ಎಕ್ಸ್ ಟೇನ್ಷನ್,
10 ನೇ ಅಡ್ಡ ರಸ್ತೆ, ಸದಾಶಿವನಗರ,
ಬೆಂಗಳೂರು 560 080.